**<u>ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಹಾನಗಲ್ಲ.</u>**

**<u>ಸಿ.ಸಿ ನಂಬರ್ಃ 5/2025</u>**

ಪಿರ್ಯಾದಿಃ ಸರ್ಕಾರ, ಪ್ರತಿನಿಧಿಸುವವರು,
ಆಡೂರ ಪೊಲೀಸ್ ಠಾಣಾ ಪೋಲೀಸರು.

ವಿರುದ್ಧ

ಆರೋಪಿಃ ಕಿರಣ ತಂದೆ ನಿಸ್ಸಿಮಪ್ಪ ಈಳಗಾರ
ವಯಾಃ 24 ವರ್ಷ, ಉಃ ವ್ಯಾಪಾರ
ವಾಸಃ ತಿಳವಳ್ಳಿ ನವಗ್ರಾಮ , ತಾಃ ಹಾನಗಲ್ಲ,
ಜಿಃ ಹಾವೇರಿ.

**<u>ದೋಷಾರೋಪಣೆ</u>**

ನಾನು ಶ್ರೀ. ಜನಾರ್ಧನ.ಎಸ್.ಕೆ, ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ, ಹಾನಗಲ್ಲ, ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

1. ದಿಃ 30-09-2024 ರಂದು ಮುಂಜಾನೆ 10-30 ಘಂಟೆಯ ಸುಮಾರಿಗೆ ಆಡೂರ ಪೊಲೀಸ್ ಠಾಣೆಯ ವ್ಯಾಪ್ತಿಯ ತಿಳವಳ್ಳಿ ಗ್ರಾಮದಲ್ಲಿ ಆರೋಪಿಯಾದ ನೀವು ಸರ್ಕಾರದಿಂದ ಯಾವುದೇ ಪಾಸ್ ವ ಪರ್ಮೀಟ್ ಪಡೆಯದೇ ಕುಸನೂರು ಕ್ರಾಸ್ ಹತ್ತಿರ ಸಾರ್ವಜನಿಕ ರಸ್ತೆಯ ಪಕ್ಕದಲ್ಲಿ ನಿಂತುಕೊಂಡು ಬ್ಯಾಗಪೈಬರ್ ಡಿಲಕ್ಸ ವಿಸ್ಕಿಯ 180 ಮೀಲಿಯ ಮದ್ಯ ತುಂಬಿದ 15 ಮದ್ಯದ ಪೌಚುಗಳನ್ನು , ಆಫೀಸರ್ ಚಾಯ್ಸ ವಿಸ್ಕಿಯ 180 ಮೀಲಿಯ ಮದ್ಯ ತುಂಬಿದ 12 ಮದ್ಯದ ಪೌಚುಗಳನ್ನು , ಓಲ್ಡ್ ಟವರಿನ ವಿಸ್ಕಿಯ 180 ಮೀಲಿಯ ಮದ್ಯ ತುಂಬಿದ 14 ಮದ್ಯದ ಪೌಚುಗಳನ್ನು , ಟ್ರಾವಲರ್ ಪ್ರಿಮಿಯಮ್ ವಿಸ್ಕಿಯ 180 ಮೀಲಿಯ ಮದ್ಯ ತುಂಬಿದ 8 ಮದ್ಯದ ಪೌಚುಗಳನ್ನು ಮತ್ತು ತ್ರಿಏಸಸ್ ವಿಸ್ಕಿಯ 180 ಮೀಲಿಯ ಮದ್ಯ ತುಂಬಿದ 2 ಮದ್ಯದ ಪೌಚುಗಳನ್ನು ಅಕ್ರಮವಾಗಿ ನಿಮ್ಮ ವಶದಲ್ಲಿ ಇಟ್ಟುಕೊಂಡಿರುತ್ತೀರಿ. ಈ ರೀತ್ಯ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

2. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಸರ್ಕಾರದಿಂದ ಯಾವುದೇ ಪಾಸ್ ವ ಪರ್ಮಿಟ್ ಪಡೆಯದೇ ಕುಸನೂರು ಕ್ರಾಸ್ ಹತ್ತಿರ ಸಾರ್ವಜನಿಕ ರಸ್ತೆಯ ಪಕ್ಕದಲ್ಲಿ ನಿಂತುಕೊಂಡು ಬ್ಯಾಗಪೈಬರ್ ಡಿಲಕ್ಸ ವಿಸ್ಕಿಯ 180 ಮೀಲಿಯ ಮದ್ಯ ತುಂಬಿದ 15 ಮದ್ಯದ ಪೌಚುಗಳನ್ನು , ಆಫೀಸರ್ ಚಾಯ್ಸು ವಿಸ್ಕಿಯ 180 ಮೀಲಿಯ ಮದ್ಯ ತುಂಬಿದ 12 ಮದ್ಯದ ಪೌಚುಗಳನ್ನು , ಓಲ್ಡ್ ಟವರಿನ ವಿಸ್ಕಿಯ 180 ಮೀಲಿಯ ಮದ್ಯ ತುಂಬಿದ 14 ಮದ್ಯದ ಪೌಚುಗಳನ್ನು , ಟ್ರಾವಲರ್ ಪ್ರಿಮಿಯಮ್ ವಿಸ್ಕಿಯ 180 ಮೀಲಿಯ ಮದ್ಯ ತುಂಬಿದ 8 ಮದ್ಯದ ಪೌಚುಗಳನ್ನು ಮತ್ತು ತ್ರಿಏಸಸ್ ವಿಸ್ಕಿಯ 180 ಮೀಲಿಯ ಮದ್ಯ ತುಂಬಿದ 2 ಮದ್ಯದ ಪೌಚುಗಳನ್ನು ಇಟ್ಟುಕೊಂಡು ನಿಮ್ಮ ಪಾಯಿದೆಗೋಸ್ಕರ ಸಾರ್ವಜನಿಕರಿಂದ ಹೆಚ್ಚಿನ ಹಣಕ್ಕೆ ಮಾರಾಟ ಮಾಡಲು ಸಂಗ್ರಹಿಸಿಟ್ಟು ಕೊಂಡಿರುತ್ತೀರಿ. ಈ ರೀತ್ಯ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

ಸದರಿ ಮೇಲೆ ಹೋರಿಸಿದ ಆರೋಪಗಳನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿದ್ದರಿಂದ ಅವು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದು ಅಂತಾ ಆದೇಶ ಮಾಡಿರುತ್ತೇನೆ.

ಪ್ರ: 1. ಈಗ ಮೇಲೆ ಓದಿ ಹೇಳಿದ ಆರೋಪಗಳು ನಿಮಗೆ ತಿಳಿದಿದೆಯೋ?

ಆರೋಪಿಯ ಉತ್ತರ:

ಪ್ರ: 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೊ?

ಆರೋಪಿಯ ಉತ್ತರ:

(ಆರೋಪಿತನಿಗೆ ದಿನಾಂಕ: 19-04-2025 ರಂದು ದೋಷಾರೋಪಣೆಯನ್ನು ಅವನಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

ಹಾನಗಲ್ಲ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.,

ದಿನಾಂಕ: 19-04-2025. ನ್ಯಾಯಾಲಯ, ಹಾನಗಲ್ಲ.

ಆರೋಪಿಯ ಸಹಿ